BKN-02

Sl.No. : **Total No. of Pages : 3**

ದ್ವಿತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ - 2025
(SLM Scheme)
ಕನ್ನಡ ಭಾಷೆ (ಪತ್ರಿಕೆ–2)
ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು
(ಪ್ರಾಚೀನ ಕನ್ನಡ ಕಾವ್ಯ. ಸಣ್ಣ ಕಥೆಗಳು, ಗದ್ಯ ಸಂಪದ, ವಿಮರ್ಶೆ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಪ್ರಾಚೀನ ಕನ್ನಡ ಕಾವ್ಯ : 20 ಅಂಕಗಳು)

ಪ್ರ1) ಒಂದರ ಭಾವವನ್ನು ಸಂದರ್ಭ ಸಹಿತ ವಿವರಿಸಿ: **[1×5=5]**

೧) ಅಮೃತಮತಿಯೆತ್ತ. ರೂಪಾ
ಧಮನ್, ಅಷ್ಟಾಂವಕನೆತ್ತ, ಚಿತ್ರಮಪಾತ್ರೇ
ರಮತೇ ನಾರೀ, ಎಂಬುದು
ಸಮನಿಸಿದುದು, ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

೨) ಮನಸಿಜ ಕೇಳಣ್ಣ ನಿನಗೆ, ಎನಗಿಂದು ದು
ರ್ಮನದಿಂದ ಜಗಳವಪ್ಪುದಕೆ
ಘನವೇನು ಹೇಳು, ನಿಷ್ಕಾರಣ ಕದನವ
ಜನಪರು, ಎಸೆಗು ವರೆಯೆಂದ

ಪ್ರ2) ಹತ್ತು ಪದಗಳಿಗೆ ಅರ್ಥ ಬರೆಯಿರಿ: **[10×½=5]**

ಪಥ, ಅಟವಿ, ಹುಸಿ, ಬಾಳ್, ಬೆಂತರ, ಕದಳಿ, ಅಂಬು, ತುರಗ, ಜಲಧಿ, ಶರ, ಫಣಿ, ಚಾಪ, ಅಲಂಪು, ಕೂರ್ಮೆ.

ಪ್ರ3) <u>ಎರಡರ</u> ಸಂದರ್ಭ ಸ್ವಾರಸ್ಯ ವಿವರಿಸಿ: **[2×2½=5]**

೧) ಗುರುವಿಲ್ಲಾ ಕರ್ಣನಿಲ್ಲಾ ಗುರುವಿನ ಮಗನಿಲ್ಲಾ

೨) ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು

೩) ನಂದಿ ಮಹಾಕಾಳರಂ ಮರೆವುತಿರೆ ಶಂಕರಂ

೪) ಇದು ಎಲ್ಲಾ ನನ್ನ ದುರದೃಷ್ಟ ಶಿವನೆ

ಪ್ರ4) <u>ಒಂದು</u> ವಿಷಯ ಕುರಿತು ಟಿಪ್ಪಣಿ ಬರೆಯಿರಿ: **[1×5=5]**

೧) ಬಸವಣ್ಣ

೨) ಅಶ್ವತ್ಥಾಮನ್

<u>ವಿಭಾಗ–ಬಿ</u>

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು : 30 ಅಂಕಗಳು)

ಪ್ರ5) <u>ಒಂದು</u> ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಯಶೋಧರ ಚರಿತೆಯಲ್ಲಿನ ಅಮೃತಮತಿಯ ಪ್ರಸಂಗದ ವಿಶೇಷತೆಯನ್ನು ನಿರೂಪಿಸಿ.

೨) ಪ್ರಭುಲಿಂಗ ಲೀಲೆಯ ಮಹತ್ವವನ್ನು ವಿವರಿಸಿ.

ಪ್ರ6) <u>ಎರಡು</u> ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ಭಾರತ ದೇಶದ ರೈತನ ಸಮಸ್ಯೆಗೆ ಚಿಕಿತ್ಸೆಯನ್ನು 'ಧನ್ವಂತರಿಯ ಚಿಕಿತ್ಸೆ' ಕಥೆಯಲ್ಲಿ ಕುವೆಂಪುರವರು ಹೇಗೆ ನೀಡಿದ್ದಾರೆ? ವಿವರಿಸಿ.

೨) ಸಮಾಜದಲ್ಲಿನ ಮೇಲು–ಕೀಳು, ಬಡವ–ಬಲ್ಲಿದ ಎಂಬ ವರ್ಗ ತಾರತಮ್ಯವನ್ನು 'ಶವದ ಮನೆ' ಕಥೆ ನಿವಾರಿಸುವಲ್ಲಿ ಹೇಗೆ ಯಶಸ್ವಿಯಾಗಿದೆ? ವಿಮರ್ಶಿಸಿ.

೩) ಹಳ್ಳಿಯ ಪರಿಸರದಲ್ಲಿ ವೆಂಕಟಶಾಮಿಯ ಪ್ರಣಯ ವಿಫಲಗೊಳ್ಳಲು ಕಾರಣವೇನು? ತಿಳಿಸಿ.

೪) ಬೀರ ಮತ್ತು ಲಕ್ಷ್ಮಿಯರ ಬದುಕಿನ ಚಿತ್ರಣವನ್ನು ಕಥೆಗಾರರು ಹೇಗೆ ಚಿತ್ರಿಸಿದ್ದಾರೆ ವಿವರಿಸಿ.

ವಿಭಾಗ–ಸಿ

(ಗದ್ಯ ಸಂಪದ, ವಿಮರ್ಶೆ : 30 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) 'ಬಾಳ್ವೆ ಸ್ವೀಕಾರಕ್ಕಿದೆ, ನಿರಾಕರಣೆಗಲ್ಲ' ಲೇಖನದ ಸ್ವರೂಪ ಮತ್ತು ವಿಶಿಷ್ಟತೆಯನ್ನು ಕುರಿತು ಬರೆಯಿರಿ.

೨) 'ವೈಚಾರಿಕ ಪ್ರಜ್ಞೆಗೆ ಅಡತಡೆಗಳು' ಲೇಖನದ ವಿಶ್ಲೇಷಣೆ ಮತ್ತು ಆಶಯವನ್ನು ಕುರಿತು ಬರೆಯಿರಿ.

ಪ್ರ8) ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ರಾಷ್ಟ್ರೀಯತೆ! ಒಂದು ಮರುಚಿಂತನೆಯ ಅಂಶಗಳು.

೨) ಆಲೂರು ವೆಂಕಟರಾವ್‌ರವರ ಬದುಕು–ಬರಹಗಳನ್ನು ಪರಿಚಯಿಸಿ.

ಪ್ರ9) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) 'ಸಾಹಿತ್ಯದಲ್ಲಿ ಬದ್ಧತೆ' ಲೇಖನದ ಸ್ವರೂಪ ಮತ್ತು ಮಹತ್ವವನ್ನು ಕುರಿತು ಬರೆಯಿರಿ.

೨) 'ಮಲೆಗಳಲ್ಲಿ ಮದುಮಗಳು' ಲೇಖನದಲ್ಲಿ ವ್ಯಕ್ತವಾಗುವ ಒಳನೋಟಗಳನ್ನು ಕುರಿತು ಬರೆಯಿರಿ.

ಪ್ರ10)ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ಮಹಿಳಾ ರಾಜಕೀಯ ಮೀಸಲಾತಿಯ ವಿಶಿಷ್ಟತೆಗಳು.

೨) ಹಸಿವು ಮತ್ತು ಸಂತೃಪ್ತಿಯ ನಿಲುವುಗಳು.